ರಾಜ್ಯದಲ್ಲಿ ಸುವರ್ಣ ಗ್ರಾಮ ಯೋಜನೆಯ ಕಾಮಗಾರಿ ಬಗ್ಗೆ

272 (594) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸುವರ್ಣ ಗ್ರಾಮ ಯೋಜನೆಯಡಿ 1,2 ಮತ್ತು 3ನೇ ಯೋಜನೆಯಡಿಯಲ್ಲಿ ಸೇರ್ಪಡೆಯಾಗಿರುವ ಜಿಲ್ಲೆಗಳು ಯಾವುವು (ಜಿಲ್ಲಾ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ರಾಜ್ಯದಲ್ಲಿ ಸುವರ್ಣ ಗ್ರಾಮ ಯೋಜನೆಯಡಿ 1,2 ಮತ್ತು 3ನೇ ಯೋಜನೆಯಡಿಯಲ್ಲಿ ಪ್ರಾರಂಭವಾಗಿರುವ ಕಾಮಗಾರಿಗಳು ಯಾವುವು (ಜಿಲ್ಲಾ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಇ) ಈ ಕಾಮಗಾರಿಗಳು ವಿಳಂಬವಾಗಿರಲು ಕಾರಣಗಳೇನು;

ಈ) ಈ ಯೋಜನೆಗಳಿಗಾಗಿ ಸರ್ಕಾರ ಈವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು (ಜಿಲ್ಲಾ, ತಾಲ್ಲೂಕು ಮತ್ತು ಕಾಮಗಾರಿವಾರು ವಿವರಗಳನ್ನು ನೀಡುವುದು);

ಉ) ಈ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಊ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ;

ಋ) ಹಾಗಿದ್ದಲ್ಲಿ ಎಂದು ಪೂರ್ಣಗೊಳಿಸಲಾಗುವುದು;

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಸುವರ್ಣ ಗ್ರಾಮೋದಯ ಯೋಜನೆಯ 1 ಮತ್ತು 3ನೇ ಹಂತದಡಿ ರಾಜ್ಯದ ಎಲ್ಲಾ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳು ಸೇರ್ಪಡೆಯಾಗಿರುತ್ತವೆ ಹಾಗೂ 2ನೇ ಹಂತದಡಿ ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳು ಸೇರ್ಪಡೆಯಾಗಿರುತ್ತವೆ.

ಆ) ಯೋಜನೆಯ 1ನೇ ಹಂತದ 1204 ಗ್ರಾಮಗಳಲ್ಲಿ ರಸ್ತೆ/ಚರಂಡಿ, ಅಂಗನವಾಡಿ/ಸಮುದಾಯ ಭವನ ಕಟ್ಟಡ ಕಾಮಗಾರಿಗಳು ಪ್ರಾರಂಭವಾಗಿರುತ್ತವೆ. 2 ಮತ್ತು 3ನೇ ಹಂತದಡಿ ಕ್ರಮವಾಗಿ 222 ಮತ್ತು

1547 ಆಯ್ಕೆಯಾದ ಗ್ರಾಮಗಳ ಗ್ರಾಮಾಭಿವೃದ್ಧಿ ಯೋಜನೆ ತಯಾರಿಸಿ ಅನುಮೋದನೆ ನೀಡಲಾಗುತ್ತಿದೆ. (ಅನುಬಂಧ–1 ಮತ್ತು 2ರಲ್ಲಿ ನೀಡಲಾಗಿದೆ)

ಇ) ಗ್ರಾಮಾಭಿವೃದ್ಧಿ ಯೋಜನೆಗಳು ಅನುಮೋದನೆಯ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಈ) ವಿವರವನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಉ) ಪ್ರಗತಿ ಆಧಾರದ ಮೇರೆಗೆ ಕಾಲಕಾಲಕ್ಕೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಊ) ಪ್ರತಿ ಹಂತದ ಯೋಜನೆಯನ್ನು 3 ವರ್ಷಗಳಲ್ಲಿ ಸಂಪೂರ್ಣ ಗೊಳಿಸಲಾಗುವುದು.

ಋ) 1ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯನ್ನು 2010–11 ರಲ್ಲಿ ಸಂಪೂರ್ಣಗೊಳಿಸಲಾಗುವುದು.



O.17 F –36

ಕರ್ನಾಟಕ ವಿಧಾನಸಭೆ ಸದಸ್ಯರಾದ ಶ್ರೀ.ಬಂಡೆಪ್ಪ ಕಾಶೆಂಪೂರ್ ಇವರ ಮುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:594ರ ಅನುಬಂಧ-2

ಸುವರ್ಣ ಗ್ರಾಮೋದಯ ಯೋಜನೆಯಡಿ ಈವರೆಗೂ ಬಿಡುಗಡೆ ಮಾಡಿರುವ ಅನುದಾನ ಮತ್ತು ಆಯ್ಕೆಯಾದ ಗ್ರಾಮಗಳ ಸಂಖ್ಯೆ

ಕ್ರ. ಸಂ	ಜಿಲ್ಲೆ	ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ)	ಆಯ್ಕೆಯಾದ ಗ್ರಾಮಗಳ ಸಂಖ್ಯೆ			
			1ನೇ ಹಂತ	2ನೇ ಹಂತ	3ನೇ ಹಂತ	ಒಟ್ಟು
1	ಬಾಗಲಕೋಟೆ	3237.71	45		42	87
2	ಬೆಂಗಳೂರು-ನ	1685.90	24		32	56
3	ಬೆಂಗಳೂರು-ಗ್ರಾ	1601.86	31		40	71
4	ಬೆಳಗಾವಿ	8041.80	97		88	185
5	ಬಳ್ಳಾರಿ	3181.32	32	38	38	108
6	ಬೀದರ್	3467.71	49	35	46	130
7	ಬಿಜಾಪುರ	3750.38	34		47	81
8	ಚಿಕ್ಕಬಳ್ಳಾಪುರ	2291.27	34		55	89
9	ಚಾಮರಾಜನಗರ	2221.05	24		25	49
10	ಚಿಕ್ಕಮಗಳೂರು	2331.28	30		52	82
11	ಚಿತ್ರದುರ್ಗ	3286.35	32		51	83
12	ದಕ್ಷಿಣಕನ್ನಡ	2603.89	32		33	65
13	ದಾವಣಗೆರೆ	3608.54	35		47	82
14	ಧಾರವಾಡ	1636.31	16		16	32
15	ಗದಗ	1461.77	19		20	39
16	ಗುಲ್ಬರ್ಗಾ	6582.67	67	74	106	247
17	ಹಾಸನ	3597.54	102		118	220
18	ಹಾವೇರಿ	3189.41	29		39	68
19	ಕೊಡಗು	942.49	21		16	37
20	ಕೋಲಾರ	2460.38	46		85	131
21	ಕೊಪ್ಪಳ	2586.02	31	25	32	88
22	ಮಂಡ್ಯ	3744.12	61		83	144
23	ಮೈಸೂರು	4297.08	46		76	122
24	ರಾಯಚೂರು	2158.09	34		54	88
25	ರಾಮನಗರ	3888.11	47	50	59	156
26	ಶಿವಮೊಗ್ಗ	2733.79	45		57	102
27	ತುಮಕೂರು	4109.13	67		98	165
28	ಉಡುಪಿ	2353.84	48		66	114
29	ಉತ್ತರ	2069.69	26		26	52
	ಒಟ್ಟು	89121.50	1204	222	1547	2973

ಟಿಪ್ಪಣಿ: 1). 2ನೇ ಹಂತದ ಯೋಜನೆಯು ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳಲ್ಲಿ ಜಾರಿಯಲ್ಲಿರುತ್ತದೆ.